ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ
ಆನಂದರಾವ್ ವೃತ್ತ, ಬೆಂಗಳೂರು – 560009

ಸಂಖ್ಯೆ: ಟಿಸಿಎನ್/188/2019-20

ದಿನಾಂಕ: 21-10-2019

ಸುತ್ತೋಲೆ

ವಿಷಯ:- 2019-20ನೇ ಸಾಲಿನ 2ನೇ ವರ್ಷದ ಬಿ.ಎಸ್.ಸಿ(ಎಂಎಲ್‌ಟಿ) ಪದವಿ ಶಿಕ್ಷಣಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ವೈದ್ಯಕೀಯ ಶಿಕ್ಷಣ ಇಲಾಖೆಗಳ ಸೇವಾ ನಿರತ ವೈದ್ಯಕೀಯ ಪ್ರಯೋಗ ಶಾಲಾ ಟೆಕ್ನಾಲಜಿಸ್ಟ್ ನೌಕರರಿಂದ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಇವರ ಅಧಿಸುಚನೆ ಸಂಖ್ಯೆ: ಡಿಎಸ್‌ಡಬ್ಲ್ಯೂ/ಸಿಓಇ/2019-20 ದಿನಾಂಕ: 29-05-2019

******

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ವೈದ್ಯಕೀಯ ಶಿಕ್ಷಣ ಮತ್ತು ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಈ ಇಲಾಖೆಗಳಿಂದ ಅನ್ಯಪರ ಸೇವೆಯ ಮೇಲೆ ಅಥವಾ ಪ್ರತಿ ನಿಯೋಜನೆಯ ಮೇರೆಗೆ ಇತರ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸೇವಾನಿರತ ವೈದ್ಯಕೀಯ ಪ್ರಯೋಗ ಶಾಲಾ ಟೆಕ್ನಾಲಜಿಸ್ಟ್ ನೌಕರರಿಂದ 2019-20ನೇ ಸಾಲಿನ 2ನೇ ವರ್ಷದ ಬಿ.ಎಸ್.ಸಿ(ಎಂಎಲ್‌ಟಿ) ಪದವಿ ವ್ಯಾಸಂಗಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಬಿ.ಎಸ್.ಸಿ(ಎಂಎಲ್‌ಟಿ) ವ್ಯಾಸಂಗಕ್ಕೆ ಆಯ್ಕೆ ಬಯಸಿ ಸಲ್ಲಿಸಬೇಕಾಗಿರುವ ನಿಗದಿತ ಅರ್ಜಿ ನಮೂನೆಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಲಾಗಿದೆ. ಈ ಬಗ್ಗೆ ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರು ಮತ್ತು ನಿಯಂತ್ರಣಾಧಿಕಾರಿಗಳು ಅವರ ಅಧೀನ ಕಛೇರಿಗಳಲ್ಲಿ/ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ವೈದ್ಯಕೀಯ ಪ್ರಯೋಗ ಶಾಲಾ ಟೆಕ್ನಾಲಜಿಸ್ಟ್ ನೌಕರರ ಗಮನಕ್ಕೆ ತರಲು ಮತ್ತು ಆಯ್ಕೆ ಬಯಸಿ ಅರ್ಹ ನೌಕರರು ಸಲ್ಲಿಸುವ ಅರ್ಜಿಗಳನ್ನು ಈ ನಿರ್ದೇಶನಾಲಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಹಾಗೂ ಪೀಠಸ್ಥರು, ಬಿ.ಎಸ್.ಸಿ(ಎಂಎಲ್‌ಟಿ) ಪದವಿ ವ್ಯಾಸಂಗದ ಆಯ್ಕೆ ಸಮಿತಿ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು-9 ಇವರಿಗೆ ಕಳುಹಿಸಿ ಕೊಡಲು ಕೋರಿದೆ.

ಈ ಕೆಳಕಂಡ ಅರ್ಹತೆಗಳನ್ನು ಹೊಂದಿರುವ ಸೇವಾ ನಿರತ ವೈದ್ಯಕೀಯ ಪ್ರಯೋಗ ಶಾಲಾ ಟೆಕ್ನಾಲಜಿಸ್ಟ್ ನೌಕರರಿಂದ ಸ್ವೀಕರಿಸಲಾಗುವ ಅರ್ಜಿಗಳನ್ನು ಮಾತ್ರ ಆಯ್ಕೆ ಸಮಿತಿಗೆ ಕಳುಹಿಸಿಕೊಡಲು ಸೂಚಿಸಲಾಗಿದೆ. ಅರ್ಹತೆ ಹೊಂದಿರದ/ ಅರ್ಹತೆ ಇಲ್ಲದ ನೌಕರರ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಕಳುಹಿಸಿಕೊಡತಕ್ಕದ್ದಲ್ಲ.

1) 2ನೇ ವರ್ಷದ ಬಿ.ಎಸ್.ಸಿ(ಎಂಎಲ್‌ಟಿ) ಪದವಿ ವ್ಯಾಸಂಗಕ್ಕಾಗಿ ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿರುವ ಕಡೆಯ ದಿನಾಂಕಕ್ಕೆ 48 ವರ್ಷಗಳ ವಯೋಮಿತಿಯನ್ನು ಎಲ್ಲಾ ವರ್ಗದ ಅಭ್ಯರ್ಥಿಗಳು ಮೀರಿರಬಾರದು.
2) ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿರುವ ಕಡೆಯ ದಿನಾಂಕಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನೇಮಕಾತಿ ಹೊಂದಿ, ಖಾಯಂಪೂರ್ವ ಸೇವಾವಧಿಯು ಸೇರಿದಂತೆ ಅಭ್ಯರ್ಥಿಯು 05 ವರ್ಷಗಳ ನಿರಂತರ ಸೇವೆಯನ್ನು (ರೆಗ್ಯುಲರ್ ಸರ್ವೀಸ್) ಪೂರೈಸಿರಬೇಕು. ಅಭ್ಯರ್ಥಿಯು ಖಾಯಂಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ನಿರ್ದೇಶನಾಲಯದಿಂದ ಘೋಷಿಸಿದ್ದರೆ ಮಾತ್ರ ಅಂತಹ ಅಭ್ಯರ್ಥಿಗಳ ಅರ್ಜಿಗಳನ್ನು ಕಳುಹಿಸಿಕೊಡತಕ್ಕದ್ದು.
3) ಅನಧಿಕೃತ ಗೈರುಹಾಜರಿಯಾಗಿರುವ, ಅಮಾನತ್ತಿನಲ್ಲಿರುವ, ಸ್ಥಳೀಯ ಅಭ್ಯರ್ಥಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ವೈದ್ಯಕೀಯ ಪ್ರಯೋಗ ಶಾಲಾ ಟೆಕ್ನಾಲಜಿಸ್ಟ್ ಅರ್ಜಿಗಳನ್ನು ಆಯ್ಕೆ ಸಮಿತಿಗೆ ಕಳುಹಿಸತಕ್ಕದ್ದಲ್ಲ.

4) ನೌಕರರ ಬಗ್ಗೆ ಇಲಾಖಾ ವಿಚಾರಣೆ ಬಾಕಿ ಇಲ್ಲದಿರುವ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳಿಂದ ದೃಡೀಕರಣ ಪತ್ರ ಪಡೆದು ಸಲ್ಲಿಸುವುದು
5) 2ನೇ ವರ್ಷದ ಬಿ.ಎಸ್.ಸಿ (ಎಂಎಲ್‌ಟಿ) ಪದವಿ ವ್ಯಾಸಂಗದ ಆಯ್ಕೆಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ (1)ರ ಪರಿಚ್ಛೇಧ2ಎ(1) ಮತ್ತು (2) ರನ್ವಯ ಅರ್ಹರಾಗಿರುವಂತಹ ವೈದ್ಯಕೀಯ ಪ್ರಯೋಗ ಶಾಲಾ ಟೆಕ್ನಾಲಜಿಸ್ಟ್‌ಗಳು ಎಸ್.ಎಸ್.ಎಲ್.ಸಿ ಹಾಗೂ 3 ವರ್ಷದ (DMLT) ಅಥವಾ ಪದವಿ ಪೂರ್ವ ಶಿಕ್ಷಣ (PUC) ಹಾಗೂ 2 ವರ್ಷಗಳ ಡಿಪ್ಲೋಮೋ ಇನ್ ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಾಜಿಸ್ಟ್ ಕೋರ್ಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ಡಿಪ್ಲೋಮೋ ಇನ್ ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಾಜಿಸ್ಟ್ ಕೋರ್ಸ್‌ನಲ್ಲಿ ಶೇ 60%ಕ್ಕಿಂತ ಕಡಿಮೆ ಇಲ್ಲದಂತೆ (ಆಗ್ರಗೇಟ್) ಅಂಕಗಳನ್ನು ಪಡೆದಿದ್ದಲ್ಲಿ ಮಾತ್ರ ಅರ್ಹರಾಗಿರುತ್ತಾರೆ. ಅಂತಹ ನೌಕರರು ಮೇಲಾಧಿಕಾರಿಗಳ ಮೂಲಕವೇ ಅರ್ಜಿ ಸಲ್ಲಿಸತಕ್ಕದ್ದು. ನೇರವಾಗಿ ಅಥವಾ ಮುಂಗಡವಾಗಿ ಕಳುಹಿಸುವ ಅರ್ಜಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.
6) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಬೇರೆ ಇಲಾಖೆ/ ಸಂಸ್ಥೆಗಳಿಗೆ ನಿಯೋಜನೆಗೊಂಡು ಅದೇ ಇಲಾಖೆ/ ಸಂಸ್ಥೆಗಳಲ್ಲಿ ವಿಲೀನಗೊಂಡಿರುವ ವೈದ್ಯಕೀಯ ಪ್ರಯೋಗ ಶಾಲಾ ಟೆಕ್ನಾಲಜಿಸ್ಟ್ ನೌಕರರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
7) 2ನೇ ವರ್ಷದ ಬಿ.ಎಸ್.ಸಿ (ಎಂಎಲ್‌ಟಿ) ವ್ಯಾಸಂಗಕ್ಕೆ ಆಯ್ಕೆಯಾದ ನೌಕರರು ಬಿ.ಎಸ್.ಸಿ (ಎಂಎಲ್‌ಟಿ) ಕೋರ್ಸಿಗೆ ಪ್ರವೇಶ ಪಡೆದ ನಂತರ ಒಂದು ವೇಳೆ ಕೋರ್ಸ್‌ನ್ನು ತ್ಯಾಜಿಸಿದಲ್ಲಿ/ ಬಿಟ್ಟುಹೋದಲ್ಲಿ ಅಂತಹ ನೌಕರರು ಅವರು ಪಡೆದಿರುವ ವೇತನ ಮತ್ತು ಬೋಧನಾ ಶುಲ್ಕ ಇತ್ಯಾದಿಗಳನ್ನು ದಂಡ ಸಹಿತ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಮುಂದೆ ಅವರು ಈ ಉನ್ನತ ವ್ಯಾಸಂಗಕ್ಕೆ ಅರ್ಜಿಗಳನ್ನು ಸಲ್ಲಿಸಲು ಅನರ್ಹರಾಗುತ್ತಾರೆ. ಅಲ್ಲದೇ, ಅಂತಿಮ ಪರೀಕ್ಷೆಯಲ್ಲಿ ಅನುತ್ತೀರ್ಣರಾದರೆ ಕೆ.ಸಿ.ಎಸ್.ಆರ್. ನಿಯಮಾವಳಿ ಪ್ರಕಾರ ವ್ಯಾಸಂಗದ ಅವಧಿಯಲ್ಲಿ ಪಡೆದಿರುವ ವ್ಯಾಸಂಗ ಶುಲ್ಕ ವೇತನ ಹಾಗೂ ಇತರ ಭತ್ಯೆಗಳನ್ನು ಸರ್ಕಾರಕ್ಕೆ ಹಿಂತಿರುಗಿಸಬೇಕಾಗುತ್ತದೆ ಎಂಬ ಷರತ್ತಿಗೊಳಪಟ್ಟಿರುತ್ತದೆ.

2019-20ನೇ ಸಾಲಿನ 2ನೇ ವರ್ಷದ ಬಿ.ಎಸ್.ಸಿ (ಎಂಎಲ್‌ಟಿ) ಪದವಿ ವ್ಯಾಸಂಗದ ಆಯ್ಕೆಗಾಗಿ ಆಹ್ವಾನಿಸಿರುವ ಅರ್ಜಿ ನಮೂನೆಯಲ್ಲಿ ಹೇಳಲಾಗಿರುವ ಪ್ರತಿಯೊಂದು ಮಾಹಿತಿಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಎಲ್ಲವೂ ಸರಿಯಾಗಿದೆಯೆಂದು ಕಂಡು ಬಂದಲ್ಲಿ ಮಾತ್ರ ಅಂತಹ ಅರ್ಹ ಸೇವಾ ನಿರತ ವೈದ್ಯಕೀಯ ಪ್ರಯೋಗ ಶಾಲಾ ಟೆಕ್ನಾಲಜಿಸ್ಟ್‌ಗಳು ಅರ್ಜಿಗಳನ್ನು ದಿನಾಂಕ 25-10-2019 ರ ಸಾಯಂಕಾಲ 5.00 ಗಂಟೆಯೊಳಗೆ ಅಥವಾ ಅದಕ್ಕಿಂತ ಮುಂಚಿತವಾಗಿ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಹಾಗೂ ಪೀಠಸ್ಥರು, 2ನೇ ವರ್ಷದ ಬಿ.ಎಸ್.ಸಿ (ಎಂಎಲ್‌ಟಿ) ಪದವಿ ವ್ಯಾಸಂಗದ ಆಯ್ಕೆ ಸಮಿತಿ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು-560009 ಇವರಿಗೆ ತಲುಪುವಂತೆ ಕಳುಹಿಸಿಕೊಡಲು ಕೋರಲಾಗಿದೆ. ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿರುವ ಕಡೆಯ ದಿನಾಂಕ 25-10-2019 ರ ನಂತರ ಅಂಚೆ ಮೂಲಕವಾಗಲೀ ಅಥವಾ ಇನ್ನಾವುದೇ ರೀತಿಯಲ್ಲಾಗಲಿ ಬರುವ ಅರ್ಜಿಗಳನ್ನು ಆಯ್ಕೆ ಪರಿಗಣಿಸುವುದಿಲ್ಲ. ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳು ಅರ್ಜಿಗಳನ್ನು ಕಳುಹಿಸುವಾಗ ಲಕೋಟೆಯ ಮೇಲೆ ಸ್ಪಷ್ಟವಾಗಿ ಮತ್ತು ದಪ್ಪ ಅಕ್ಷರಗಳಲ್ಲಿ "2019-20ನೇ ಸಾಲಿನ 2ನೇ ವರ್ಷದ ಬಿ.ಎಸ್.ಸಿ (ಎಂಎಲ್‌ಟಿ) ಪದವಿ ವ್ಯಾಸಂಗದ ಆಯ್ಕೆಗಾಗಿ ಅರ್ಜಿ" ಎಂದು ನಮೂದಿಸಲು ಕೋರಲಾಗಿದೆ.

ಪೀಠಸ್ಥರು,
ಬಿ.ಎಸ್.ಸಿ (ಎಂಎಲ್‌ಟಿ) ಪದವಿ ವ್ಯಾಸಂಗದ ಆಯ್ಕೆ ಸಮಿತಿ
ಹಾಗೂ
ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು.

ಪ್ರತಿಯನ್ನು:-

1) ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ಮತ್ತು ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ, 4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

2) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

ಪ್ರತಿಯನ್ನು ಈ ಕೆಳಕಂಡ ಅಧಿಕಾರಿಗಳಿಗೆ ಅವರುಗಳ ಅಧೀನದಲ್ಲಿ ಬರುವ ಅರ್ಹ ಸೇವಾನಿರತ ವೈದ್ಯಕೀಯ ಪ್ರಯೋಗ ಶಾಲಾ ಟೆಕ್ನಾಲಜಿಸ್ಟ್‌ಗಳು ನೌಕರರ ಗಮನಕ್ಕೆ ತರಲು ಮತ್ತು ಅರ್ಜಿ ನಮೂನೆಯನ್ನು ಒದಗಿಸಲು ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

1) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ........................................
2) ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ........................................
3) ಡೀನ್ ಮತ್ತು ನಿರ್ದೇಶಕರು, ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು/ ಮೈಸೂರು/ಹುಬ್ಬಳ್ಳಿ/ಬಳ್ಳಾರಿ/ಬೆಳಗಾವಿ/ಶಿವಮೊಗ್ಗ/ಮಂಡ್ಯ/ಬೀದರ್/ಹಾಸನ/ಗುಲ್ಬರ್ಗಾ/ಚಾಮರಾಜನಗರ ಕೊಡಗು....
4) ವೈದ್ಯಕೀಯ ಅಧೀಕ್ಷಕರು, ಬೋಧನಾ ಆಸ್ಪತ್ರೆ, ........................................................................................
5) ನಿರ್ದೇಶಕರು, ಮಿಂಟೋ ಕಣ್ಣಾಸ್ಪತ್ರೆ, ಬೆಂಗಳೂರು.
6) ಆಯುಕ್ತರು, ಬೆಂಗಳೂರು ಮಹಾನಗರ ಪಾಲಿಕೆ, ಮೈಸೂರು/ಧಾರವಾಡ/ಹುಬ್ಬಳ್ಳಿ/ಮಂಗಳೂರು/ಬೆಳಗಾಂ ಮತ್ತು ಗುಲ್ಬರ್ಗಾ.
7) ಅಧ್ಯಕ್ಷರು, ಕೆ.ಎಸ್.ಆರ್.ಟಿ.ಸಿ. ಬೆಂಗಳೂರು.
8) ಆರಕ್ಷಕ ಮಹಾ ನಿರ್ದೇಶಕರು ಮತ್ತು ಮಹಾನಿರೀಕ್ಷಕರು, ಕಾರಾಗೃಹ ಇಲಾಖೆ, ಹೊಸೂರು ರಸ್ತೆ, ಕೋರಮಂಗಲ, ಬೆಂಗಳೂರು.
9) ಪ್ರಾಂಶುಪಾಲರು, ಕೆ.ಎಸ್.ಆರ್.ಪಿ ಹಾಗೂ ಪಿ.ಟಿ.ಎಸ್. ಕೋರಮಂಗಲ, ಮೈಸೂರು ರಸ್ತೆ, ಬೆಂಗಳೂರು.
10) ಆರೋಗ್ಯಾಧಿಕಾರಿಗಳು, ಕೃಷ್ಣ ಮೇಲ್ದಂಡೆ ಯೋಜನೆ, ಆಲಮಟ್ಟಿ, ಬಿಜಾಪುರ.
11) ಪ್ರಾಂಶುಪಾಲರು, ದಂತ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು.
12) ವೈದ್ಯಕೀಯ ಅಧೀಕ್ಷಕರು, ಕೆ.ಸಿ.ಜಿ. ಆಸ್ಪತ್ರೆ/ ಹೆಚ್.ಎಸ್.ಐ.ಎಸ್. ಘೋಷಾ ಆಸ್ಪತ್ರೆ/ ಕುಷ್ಠರೋಗ ಆಸ್ಪತ್ರೆ, ಮಾಗಡಿ ರಸ್ತೆ/ ಸಾರ್ವಜನಿಕ ಆಸ್ಪತ್ರೆ, ಜಯನಗರ/ ಸಾರ್ವಜನಿಕ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು.
13) ನಿರ್ದೇಶಕರು ಹಾಗೂ ಪೀಠಸ್ಥರು, ಬಿ.ಎಸ್.ಸಿ (ಎಂಎಲ್‌ಟಿ) ಪದವಿ ವ್ಯಾಸಂಗದ ಆಯ್ಕೆ ಸಮಿತಿ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ಆಪ್ತ ವಿಭಾಗಕ್ಕೆ ಮಾಹಿತಿಗಾಗಿ.
14) ನಿರ್ದೇಶಕರು ಹಾಗೂ ಸದಸ್ಯರು, ಬಿ.ಎಸ್.ಸಿ (ಎಂಎಲ್‌ಟಿ) ಪದವಿ ವ್ಯಾಸಂಗದ ಆಯ್ಕೆ ಸಮಿತಿ, ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇವರ ಆಪ್ತ ವಿಭಾಗಕ್ಕೆ ಮಾಹಿತಿಗಾಗಿ.
15) ಪ್ರಾಂಶುಪಾಲರು ಹಾಗೂ ಸದಸ್ಯರು, ಬಿ.ಎಸ್.ಸಿ (ಎಂಎಲ್‌ಟಿ) ಪದವಿ ವ್ಯಾಸಂಗದ ಆಯ್ಕೆ ಸಮಿತಿ, ಸರ್ಕಾರಿ ಔಷಧ ಮಹಾವಿದ್ಯಾಲಯ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
16) ಉಪನಿರ್ದೇಶಕರು (ವೈ.ಶಿ.) ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಎಸ್.ಸಿ (ಎಂಎಲ್‌ಟಿ) ಪದವಿ ವ್ಯಾಸಂಗದ ಆಯ್ಕೆ ಸಮಿತಿ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
17) ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ, ವೈದ್ಯಕೀಯ ಪ್ರಯೋಗ ಶಾಲಾ ಟೆಕ್ನಾಲಜಿಸ್ಟ್‌ಗಳು, ಆಕುಕ ಸೇವೆಗಳ ನಿರ್ದೇಶನಾಲಯದ ಆವರಣ, ಬೆಂಗಳೂರು.
18) ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ
ಆನಂದರಾವ್ ವೃತ್ತ, ಬೆಂಗಳೂರು  560009

ಸಂಖ್ಯೆ: ಟಿಸಿಎನ್/188/2019-20 ದಿನಾಂಕ: 21-10-2019

ಅರ್ಜಿ ನಮೂನೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ವೈದ್ಯಕೀಯ ಶಿಕ್ಷಣ ಮತ್ತು ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹಾಗೂ ಸದರಿ ಇಲಾಖೆಗಳಿಂದ ಅನ್ಯಪರ ಸೇವೆಯ ಮೇಲೆ ಅಥವಾ ನಿಯೋಜನೆ ಮೇಲೆ ಬೇರೆ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸೇವಾನಿರತ ವೈದ್ಯಕೀಯ ಪ್ರಯೋಗ ಶಾಲಾ ಟೆಕ್ನಾಲಜಿಸ್ಟ್‌ಗಳು ನೌಕರ 2019-20ನೇ ಸಾಲಿನ 2ನೇ ವರ್ಷದ ಬಿ.ಎಸ್.ಸಿ (ಎಂಎಲ್‌ಟಿ) ಪದವಿ ವ್ಯಾಸಂಗದ ಆಯ್ಕೆಗೆ ಭರ್ತಿ ಮಾಡಿದ ಅರ್ಜಿಗಳನ್ನು, ಪೀಠಸ್ಥರು, 2ನೇ ವರ್ಷದ ಬಿ.ಎಸ್.ಸಿ (ಎಂಎಲ್‌ಟಿ) ವ್ಯಾಸಂಗದ ಆಯ್ಕೆ ಸಮಿತಿ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು-560009 ಇವರಿಗೆ ಸಲ್ಲಿಸಲು ಅಂತಿಮ ಸಮಯ: ದಿನಾಂಕ 25-10-2019ರ ಅಪರಾಹ್ನ 5.00 ಗಂಟೆ.

| | | |
|---|---|---|
| 1. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನೇಮಕಾತಿ ಹೊಂದಿರುವ ಸೇವಾನಿರತ ವೈದ್ಯಕೀಯ ಪ್ರಯೋಗ ಶಾಲಾ ಟೆಕ್ನಾಲಜಿಸ್ಟ್‌ಗಳ ಹೆಸರು, ಪದನಾಮ ಮತ್ತು ಹಾಲಿ ಕರ್ತವ್ಯನಿರ್ವಹಿಸುತ್ತಿರುವ ಸಂಸ್ಥೆಯ ಹೆಸರು.<br>(ಪಿನ್‌ಕೋಡ್‌ನೊಂದಿಗೆ ಅಂಚೆ ವಿಳಾಸ) | |
| 2. | ಜನ್ಮ ದಿನಾಂಕ:<br>ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ ದೃಢೀಕೃತ ಪ್ರತಿಯನ್ನು ಲಗ್ತಿತ್ತಿಸುವುದು).<br>3 ವರ್ಷದ (ಆಜಐಖ) ಅಥವಾ ಪದವಿ ಪೂರ್ವ ಶಿಕ್ಷಣ (ಕಗಅ)<br>2 ವರ್ಷಗಳ ಡಿಪ್ಲೋಮೋ ಇನ್ ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಾಜಿಸ್ಟ್ ಕೋರ್ಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ಡಿಪ್ಲೋಮೋ ಇನ್ ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಾಜಿಸ್ಟ್ ಕೋರ್ಸ್‌ನಲ್ಲಿ ಶೇ 60%ಕ್ಕಿಂತ ಕಡಿಮೆ ಇಲ್ಲದಂತೆ (ಆಗ್ರಗೇಟ್) ಅಂಕಗಳನ್ನು ಪಡೆದಿರಬೇಕು.<br>(ಅಮುಕಪಟ್ಟಿಗಳು ಹಾಗೂ ಪ್ರಮಾಣ ಪತ್ರದ ಪ್ರತಿ ಲಗತ್ತಿಸುವುದು) | |
| 3. | ಸೇವೆಗೆ ಸೇರಿದ ದಿನಾಂಕ: | |
| 4. | ಡಿಪ್ಲೋಮೋ ಇನ್ ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಾಜಿಸ್ಟ್ ಕೋರ್ಸ್ ಪರೀಕ್ಷೆಯಲ್ಲಿ ಪಡೆದ ಸರಾಸರಿ ಅಂಕ: | ಒಟ್ಟು ಅಂಕ: ----------<br>ಪಡೆದ ಅಂಕ: ---------<br>ಶೇಕವಾಡವಾರು -------- |
| 5. | ಅಭ್ಯರ್ಥಿ ಇಲಾಖಾ ನೇಮಕಾತಿ ಸಮಿತಿಯಿಂದ ಆಯ್ಕೆಯಾಗಿದ್ದಾರೆಯೇ?<br>ಹೌದಾದಲ್ಲಿ ಆಯ್ಕೆ ಪಟ್ಟಿಯಲ್ಲಿನ ಕ್ರಮ ಸಂಖ್ಯೆ ಮತ್ತು ದಿನಾಂಕ:<br>(ನೇಮಕಾತಿ ಆದೇಶದ ಪ್ರತಿಯನ್ನು ಲಗತ್ತಿಸುವುದು). | |

| | | |
|---|---|---|
| 6. | ಅಭ್ಯರ್ಥಿಯು ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸಿರುವ ಬಗ್ಗೆ ನೇಮಕಾತಿ ಪ್ರಾಧಿಕಾರದಿಂದ ಘೋಷಣೆ ಆಗಿದೆಯೇ?<br>(ಆದೇಶದ ಪ್ರತಿ ಲಗತ್ತಿಸುವುದು). | |
| 7. | ನಿಯೋಜನೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆಯೇ?<br>(ನಿಯೋಜನೆಯಲ್ಲಿದ್ದರೆ ಆದೇಶದ ಪ್ರತಿ ಲಗತ್ತಿಸುವುದು.) | |
| 8. | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದಾರೆಯೇ?<br>ಹೌದಾಗಿದ್ದಲ್ಲಿ ಜಾತಿ: (ಪ್ರಮಾಣ ಪತ್ರ ಲಗತ್ತಿಸುವುದು.) | |
| 9. | ಯಾವುದಾದರೂ ಇಲಾಖಾ ವಿಚಾರಣೆ/ ನ್ಯಾಯಾಂಗ ವಿಚಾರಣೆ ಬಾಕಿ ಇದೆಯೇ? ವಿಚಾರಣೆ ಬಾಕಿ ಇರುವ ನೌಕರರು ಅರ್ಜಿಯನ್ನು ಸಲ್ಲಿಸತಕ್ಕದ್ದಲ್ಲ. | |

ಶ್ರೀ/ಶ್ರೀಮತಿ ........................................................................................................ ಆದ ನಾನು 2019–20ನೇ ಸಾಲಿನ 2ನೇ ವರ್ಷದ ಬಿ.ಎಸ್.ಸಿ (ಎಂಎಲ್‌ಟಿ) ಪದವಿ ವ್ಯಾಸಂಗದ ಆಯ್ಕೆ ಕೋರಿ ಸಲ್ಲಿಸಿರುವ ಅರ್ಜಿಯಲ್ಲಿ ನಮೂದಿಸಿರುವ ಎಲ್ಲ ವಿವರಗಳು ಸರಿಯಾಗಿದೆಯೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ. ಅರ್ಜಿಯಲ್ಲಿ ನಮೂದಿಸಿರುವ ವಿವರಗಳು ಹಾಗೂ ಒದಗಿಸಿದ ದಾಖಲೆಗಳು ತಪ್ಪು ಎಂದು ಕಂಡು ಬಂದಲ್ಲಿ ನನಗೆ ನೀಡಬಹುದಾದ ಬಿ.ಎಸ್.ಸಿ (ಎಂಎಲ್‌ಟಿ) ಪದವಿ ಸ್ಥಾನವನ್ನು ರದ್ದುಪಡಿಸಲು ಮತ್ತು ಸರ್ಕಾರವು ವಿಧಿಸುವ ದಂಡವನ್ನು ತೆರಲು ಹಾಗೂ ನನ್ನ ವಿರುದ್ಧ ಶಿಸ್ತುಕ್ರಮವನ್ನು ಜರುಗಿಸಲು ಈ ಮೂಲಕ ಒಪ್ಪಿಕೊಂಡಿರುತ್ತೇನೆ.

ಅಭ್ಯರ್ಥಿಯ ಸಹಿ : ....................................................

ಹೆಸರು : ....................................................

ಪದನಾಮ : ....................................................

ನಿಯಂತ್ರಣಾಧಿಕಾರಿಗಳ ಸಹಿ
ಮತ್ತು ಕಛೇರಿಯ ಮೊಹರು : ....................................................

ನಿಯಂತ್ರಣಾಧಿಕಾರಿಗಳ ಸಹಿ
ಕಛೇರಿ ಮೊಹರು